ತುಂಬಾ ಭಾವುಕತೆಯಿದೆ ಎಂದುಕೊಳ್ಳೋಣ. ಅದು ತನ್ನಿಂದ ತಾನೇ ನೆಗೆಟಿವ್ ಆಗುತ್ತಾ? ಅಲ್ಲಿ ನೀವು ಒರಟಾಗಿ ಕಾಣಬಹುದು. ಈ ಒಂದು ಸಾಧ್ಯತೆಯನ್ನೂ ನೋಡಬೇಕು. ಆದರೆ, ಇನ್ನೊಬ್ಬರ ಸಂವೇದನೆಯನ್ನು ಅರ್ಥ ಮಾಡಿಕೊಂಡು, ಸಾಹಿತ್ಯ ಸೃಷ್ಟಿ ಮಾಡಲು ಸಾಧ್ಯವಾದರೆ ಅದಕ್ಕಿಂತ ಉತ್ತಮ ಸಂಗತಿ ಇನ್ನೊಂದಿಲ್ಲ.

◆ **ಈ ರೀತಿ ಅಭಿಪ್ರಾಯಗಳು ನಿಲುವುಗಳು ನಿಮ್ಮ ಕತೆಗಳಲ್ಲಿ ಬಹಳ ದಟ್ಟವಾಗಿ ಕಾಣಿಸುತ್ತೆ.**

ಹೌದು, ನಾನು ಯಾವಾಗಲೂ ಮಾತಾಡುವುದು ಸಣ್ಣದನಿಯಲ್ಲಿ, ಆದರೆ ನನ್ನ ವಿಚಾರಗಳು ಮಹಿಳಾಪರವಾಗಿ ಗಟ್ಟಿಯಾಗಿರುತ್ತವೆ. ನಾನು ಬದುಕಿಗೆ ಬದ್ಧವಾಗಿ ಬರೆಯುವುದರಿಂದ ನನ್ನ ಕೃತಿಗಳು, ಪಾತ್ರಗಳು ಈ ಪ್ರಶ್ನೆಗಳನ್ನು ಎತ್ತುತ್ತಲೇ ಇರುತ್ತವೆ. ನಾನು ಯಾವುದನ್ನೂ ಕಲ್ಪಿಸಿಕೊಂಡು ಬರೆಯುವುದಿಲ್ಲ. ವಿಶೇಷವಾಗಿ ನನ್ನ ಸಣ್ಣಕತೆಗಳು ಎಲ್ಲೋ ಯಾವುದೋ ಸಂದರ್ಭದಲ್ಲಿ ನಡೆದಂತಹ ಘಟನೆಗಳು. ಅದನ್ನು ನಾನು ನೋಡಿದ್ದರೆ ಅಥವಾ ಕೇಳಿದ್ದರೆ ಅವು ಕತೆ ಆಗುತ್ತವೆ; ಮನಸ್ಸಿನಲ್ಲಿ ಮಂಥನಕ್ಕೆ ಒಳಪಟ್ಟ ಮೇಲೆ ಕತೆಯ ಚೌಕಟ್ಟನ್ನು ಪಡೆಯುತ್ತವೆ. ನಾವು ಬರೀ ಕಲ್ಪನೆ ಮೇಲೆ ಸಾಹಿತ್ಯಸೃಷ್ಟಿ ಮಾಡುತ್ತೇವೆ ಎಂದರೆ ತುಂಬಾ ದೂರ ಹೋಗಲಾಗುವುದಿಲ್ಲ.

◆ **ಬೇರೆಬೇರೆ ವೃತ್ತಿಗಳಲ್ಲಿರುವ ಹೆಣ್ಣುಮಕ್ಕಳು ಬರೆಯುತ್ತಿದ್ದಾರೆ. ಉದಾಹರಣೆಗೆ ನೇಮಿಚಂದ್ರ ಅಂತಹವರು ಕನ್ನಡ ಸಾಹಿತ್ಯದಲ್ಲಿ ಹೊಸ ಪರಿಭಾಷೆಯನ್ನು ಸೃಷ್ಟಿ ಮಾಡಿದರು. ಅದನ್ನು ಅಕಡೆಮಿಕ್ ವಲಯ ಸಾಹಿತ್ಯದ ಪರಿಧಿಯೊಳಗೆ ಇಟ್ಟು ನೋಡುವ ಬಗೆ ಹೇಗೆ?**

ಈಗಿನ ಲೇಖಕಿಯರು ತುಂಬಾ ಚೆನ್ನಾಗಿ ಬರೆಯುತ್ತಿದ್ದಾರೆ. ನೇಮಿಚಂದ್ರರ ಬರವಣಿಗೆ ನನಗೆ ಮೊದಲಿನಿಂದಲೂ ಇಷ್ಟ. ನಗರ ಕೇಂದ್ರಿತ ಆಧುನಿಕ ಯುಗದ ಮಹಿಳೆಯರ ಸಮಸ್ಯೆಗಳು–ಪರಿಹಾರಗಳು ಅವರ ಕತೆಗಳಲ್ಲಿ ಅನನ್ಯವಾಗಿ ಮೂಡಿ ಬರುತ್ತವೆ. ಅವರ ಕಾದಂಬರಿಗಳು ವಿಭಿನ್ನ



ಸಂದರ್ಶಕಿ ಪ್ರೀತಿ ನಾಗರಾಜ ಹಾಗೂ ಸಾಹಿತಿ ಎಂ.ಎಸ್. ವೇದಾ